ಶ್ರೀ ಅಶ್ವಥ್‌ನಾರಾಯಣ್ ರೆಡ್ಡಿ:- ಅಧ್ಯಕ್ಷರೇ, ಎಲ್ಲೆಲ್ಲಿ ಲ್ಯಾಂಬ್ ಸೊಸೈಟಿಗಳು ಇವೆ ಮತ್ತು ಮಹಿಳಾ ಸೊಸೈಟಿಗಳು ಇವೆ ಅಂಥ ಜಾಗಗಳಲ್ಲಿ ಲ್ಯಾಂಬ್ ಸೊಸೈಟಿಗಳಿಗೆ ಮತ್ತು ಮಹಿಳಾ ಸೊಸೈಟಿಗಳಿಗೆ ಆದ್ಯತೆಯನ್ನು ಕೊಡುವಂಥದ್ದರ ಬಗ್ಗೆ ಸರ್ಕಾರಕ್ಕೆ ಏನಾದರೂ ಯೋಚನೆ ಇದೆಯೇ?

ಅಧ್ಯಕ್ಷರು:- ಒಳ್ಳೆಯ ಪ್ರಶ್ನೆಯಾಗಿದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಅಧ್ಯಕ್ಷರೇ, ಆಹಾರ ಸರಬರಾಜಿಗೆ ಸಂಬಂಧಪಟ್ಟಂತೆ [illegible]ಯನ್ನು ಕೊಟ್ಟು ಪರಿಶೀಲನೆಯನ್ನು ಮಾಡುತ್ತೇನೆ.

ವಿಷಯ:- ಬಿಜಾಪುರಕ್ಕೆ ಕುಡಿಯುವ ನೀರು ಪೂರೈಕೆ.

347 (1090) **ಶ್ರೀ ಬಸವನಗೌಡ ರಾ. ಪಾಟೀಲ (ವಿಜಾಪುರ):-** ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರ ಕುಡಿಯುವ ನೀರಿನ ಎರಡನೆಯ ಹಂತದ ಯೋಜನೆ ಯಾವ ಹಂತದಲ್ಲಿದೆ, ಎಷ್ಟು ಹಣ ಖರ್ಚು ಮಾಡಲಾಗಿದೆ?

ಆ) ಎರಡನೆಯ ಹಂತದ ಯೋಜನೆ ಪೂರ್ತಿಯಾಗಲು ಇನ್ನೂ ಎಷ್ಟು ಹಣದ ಅವಶ್ಯಕತೆ ಇದೆ. ಈ ಹಣದ ಸಲುವಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಈ ಯೋಜನೆಯ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಜಾಕ್‌ವೆಲ್ 1290 ಮೀ. ಉದ್ದದ ಜೋಡಣೆ ಕೊಳವೆ ಮಾರ್ಗ, ಮೂರು ಮೇಲ್ಮಟ್ಟದ ಜಲಸಂಗ್ರಹಾಲಯಗಳು, ಸಂಪು ಮತ್ತು ಪಂಪಿನ ಮನೆ (ಕೆ.ಎಸ್.ಆರ್.ಟಿ.ಸಿ. ವರ್ಕ್‌ಶಾಪ್ ಹತ್ತಿರ) ಕೆಲಸಗಳು ಮುಗಿದಿದೆ. ಉಳಿದ ಕೆಲಸಗಳು ಒಳ್ಳೆಯ ಪ್ರಗತಿಯಲ್ಲಿವೆ. ಈ ಯೋಜನೆಗಾಗಿ ಇದುವರೆವಿಗೂ ರೂ. 2461.05 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಯೋಜನೆ ಪೂರ್ತಿಯಾಗಲು ರೂ. 1100.00 ಲಕ್ಷಗಳ ಅವಶ್ಯಕತೆ ಇದೆ. 1996-97ರ ಆಯವ್ಯಯ ಪಟ್ಟಿಯಲ್ಲಿ ಈ ಯೋಜನೆಗಾಗಿ ರೂ. 800 ಲಕ್ಷಗಳನ್ನು ಕಾದಿರಿಸಲಾಗಿದೆ. ಬಾಕಿ ಹಣವನ್ನು ಸಂಬಂಧಪಟ್ಟ ಮೂಲಗಳಿಂದ ಕ್ರೋಢೀಕರಿಸಲಾಗುವುದು.

ಇ) ಯೋಜನೆಯನ್ನು 90-91ರಲ್ಲಿ ಪ್ರಾರಂಭಿಸಲಾಗಿದ್ದು, ಈಗ ಒಳ್ಳೆಯ ಪ್ರಗತಿಯಲ್ಲಿದೆ. ಈ ಯೋಜನೆಯನ್ನು 1997ರ ಮಾರ್ಚ್ ತಿಂಗಳಲ್ಲಿ ಚಾಲೂ ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಬಸವನಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಎರಡನೇ ಹಂತದ ಯೋಜನೆಗೆ 800 ಲಕ್ಷ ರೂ. ಗಳನ್ನು ತೆಗೆದಿಟ್ಟಿದ್ದೇವೆ ಎಂದು ಹೇಳಿದ್ದಾರೆ. ನಾನು ಇದಕ್ಕಾಗಿ ವಿಜಾಪುರ ಜಿಲ್ಲೆಯ ಜನತೆಯ ಪರವಾಗಿ ಮಂತ್ರಿಗಳಿಗೆ ಅಭಿನಂದಿಸುತ್ತಾ ಇನ್ನೂ ಉಳಿದ 3 ಕೋಟಿ ರೂ.ಗಳಿಗಾಗಿ ವಿವಿಧ ಮೂಲಗಳಿಂದ ಸಂಗ್ರಹಿಸಲಾಗುವುದು

ಎಂದು ಹೇಳಿದ್ದಾರೆ. ಆ ವಿವಿಧ ಮೂಲಗಳು ಯಾವುವು ಎನ್ನುವುದನ್ನು ಹೇಳಬೇಕು. ಆ ಮೂಲಗಳು ಆರ್ಥಿಕವಾಗಿ ಹಣವನ್ನು ನೀಡಲಿಕ್ಕೆ ಸಾಧ್ಯವಿದೆಯೇ ಎನ್ನುವ ಬಗ್ಗೆ ಮತ್ತು ಒಂದು ಎಂ.ಜಿ.ಡಿ. ನೀರಿಗೆ ಮಾತ್ರ ಸಾಮರ್ಥ್ಯವಿರುವಂಥಹ ವಿಜಾಪುರ ಕುಡಿಯುವ ನೀರಿನ ಒಂದು ನಗರದ ಒಳಪ್ರದೇಶ-ದಲ್ಲಿರತಕ್ಕ ಪೈಪ್ ಲೈನ್ ವ್ಯವಸ್ಥೆ ಇವೊತ್ತು 6 ಎಂ.ಜಿ.ಡಿ. ಸಾಮರ್ಥ್ಯದ ಒಂದು ಕುಡಿಯುವ ನೀರಿನ ವ್ಯವಸ್ಥೆ ಜಾರಿಗೆ ಬಂದಾಗ ಈಗಿರುವ ಹಳೆಯ ಪೈಪ್ ಲೈನ್ ವ್ಯವಸ್ಥೆಯಲ್ಲಿಯೇ ಈ ಕೆಲಸಗಳನ್ನು ಮಾಡುವುದಕ್ಕೆ ಸಮರ್ಥವಾಗಿದೆಯೇ ಎನ್ನುವ ಬಗ್ಗೆ ಉತ್ತರಿಸಿ ಇದಕ್ಕಾಗಿ ಏನು ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಎರಡನೇ ಹಂತದಲ್ಲಿ ಮೂರು ಎಂ.ಜಿ.ಡಿ. ಕುಡಿಯುವ ನೀರಿನ ಯೋಜನೆಗೆ ವಿಜಾಪುರಕ್ಕೆ ಸಂಬಂಧಪಟ್ಟ ಹಾಗೆ ಈ ಹಿಂದೆ 24 ಕೋಟಿ ರೂ. ಗಳಿಗೆ ಮಂಜೂರಾತಿ ಸಿಕ್ಕಿದ್ದು ಆದರೆ ಈಗ ಈ ಯೋಜನೆಯ ಮೊತ್ತ 35 ಕೋಟಿ ರೂ.ಗಳಿಗೆ ಹೋಗಿದೆ. ಈಗಾಗಲೇ ವಿವಿಧ ಕೆಲಸಗಳನ್ನು ನಾವು ತೆಗೆದುಕೊಂಡಿದ್ದೇವೆ. ಈ ಸಾಲಿನ ಅಂದರೆ 1996-97ರಲ್ಲಿ 8 ಕೋಟಿ ರೂ.ಗಳನ್ನು ಒದಗಿಸಿದ್ದೇವೆ. ಮಾನ್ಯ ಸದಸ್ಯರು ಇನ್ನು ಉಳಿದ 3 ಕೋಟಿ ರೂ.ಗಳನ್ನು ಯಾವ ಮೂಲಗಳಿಂದ ಒದಗಿಸುತ್ತೀರಿ ಎಂದು ಕೇಳಿದ್ದಾರೆ. ಈಗಾಗಲೇ ವಿಜಾಪುರ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರು ಮುಂದೆ ಬಂದು ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಕಂದಾಯ ಸಚಿವರಾದ ಜಿಗಜಿಣಗಿಯವರೂ ಕೂಡ ಹೆಚ್.ಕೆ.ಡಿ.ಬಿ. ಮತ್ತು ಬೇರೆ ಬೇರೆ ಮೂಲಗಳಿಂದ ಹಣವನ್ನು ಕೊಡಿಸುತ್ತೇವೆ ಎಂದು ಹೇಳಿದ್ದಾರೆ. ಈ ಎಲ್ಲವುಗಳಿಂದ ಹಣ ಪಡೆದು ಸುಮಾರು 35 ಕೋಟಿ 50 ಲಕ್ಷಕ್ಕೆ ಈ ಯೋಜನೆಯನ್ನು ಪೂರ್ತಿಗೊಳಿಸಿ 1997ಕ್ಕೆ ಈ ಯೋಜನೆಯನ್ನು ಚಾಲು ಮಾಡುತ್ತೇವೆ. ಮಾನ್ಯ ಸದಸ್ಯರು ತಿಳಿಸಿದಂತೆ ಇಷ್ಟು ನೀರು ಬಂದಾಗ ಡಿಸ್ಟ್ರಿಬ್ಯುಶನ್ ಸಿಸ್ಟಂನಡಿಯಲ್ಲಿ ವಿತರಣಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಅದನ್ನೂ ಈ ಯೋಜನೆಯಲ್ಲೇ ಅಳವಡಿಸಲಾಗಿದೆ. ಅದಕ್ಕೂ ಕೂಡ ಅಂದಾಜು ಮಾಡಲಾಗಿದೆ. ಈ ಎಲ್ಲಾ ಕೆಲಸಗಳನ್ನು ಮುಗಿಸಿ 1996-97ರಲ್ಲೇ ಇದನ್ನು ಚಾಲು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾ ಈಗಾಗಲೇ ತಮಗೇ ತಿಳಿದಿರುವ ಹಾಗೆ ವಿವಿಧ ಕೆಲಸಗಳು ಬೇರೆ ಬೇರೆ ಹಂತಗಳಲ್ಲಿ ಮುಗಿಯುತ್ತ ಬಂದಿರುತ್ತದೆ. ಪೈಪ್‌ಲೈನ್ ಹಾಕುವಂಥದ್ದು, ಜಾಕ್‌ವೆಲ್ ಬೇರೆ ಬೇರೆ ಸಿಸ್ಟಂಸ್ ಕೆಲಸಗಳನ್ನೆಲ್ಲಾ ಮಾಡಿದ್ದೇವೆ, ಜೊತೆಗೆ ನಾನೂ ಕೂಡ ಅಲ್ಲಿಗೆ ಭೇಟಿ ಕೊಟ್ಟು ನೋಡಬೇಕಾಗಿದೆ ಎಂದು ನಿಮಗೆ ತಿಳಿಸಿದ್ದೇನೆ. ಈಗ ಸದನ ನಡೆಯುತ್ತಿರುವುದರಿಂದ ಅಧಿವೇಶನ ಮುಗಿದ ಮೇಲೆ ನಾನು ವಿಜಾಪುರ ನೀರು ಸರಬರಾಜು ಯೋಜನೆಯನ್ನು ಕಾರ್ಯಗತ ಮಾಡುತ್ತಿರುವುದಕ್ಕೆ ಸಂಬಂಧ-ಪಟ್ಟಂತೆ ಎಲ್ಲಾ ಕೆಲಸಗಳನ್ನು ನೋಡಿ ಏನಾದರೂ ಅಲ್ಲಿ ಲೋಪದೋಷಗಳು ಕಂಡುಬಂದರೆ ಅದನ್ನು ಸರಿಪಡಿಸತಕ್ಕಂಥ ಕಾರ್ಯವನ್ನು ಮಾಡುತ್ತೇನೆ.

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್:- ಮಾನ್ಯ ಅಧ್ಯಕ್ಷರೇ, ಹೆಚ್.ಕೆ.ಡಿ.ಬಿ. ಸಂಸ್ಥೆ ನಮ್ಮ ವಿಜಾಪುರ ಜಿಲ್ಲೆಯ ವ್ಯಾಪ್ತಿಗೆ ಬರುವುದಿಲ್ಲ. ದಯವಿಟ್ಟು ಸರ್ಕಾರಕ್ಕೆ ನನ್ನ ವಿನಂತಿ ಏನೆಂದರೆ ಇಂದಿನ ಪರಿಸ್ಥಿತಿಯಲ್ಲಿ ನಗರಸಭೆಯವರು ಎರಡು ಕೋಟಿ ರೂ.ಗಳನ್ನು ಕೊಡುವಂಥ ಆರ್ಥಿಕ ಪ್ರಬಲತೆಯನ್ನು ಹೊಂದಿರುವುದಿಲ್ಲ.

ಅಧ್ಯಕ್ಷರು:- ಶ್ರೀಮಂತರಾಗಿರುವ ನೀವುಗಳೆಲ್ಲಾ ಸ್ವಲ್ಪ ವಂತಿಗೆಯನ್ನು ಕೊಡಬೇಕು. ನಮಗೆ ನೀವು ಶ್ರೀಮಂತರಾಗಿದ್ದೀರಿ ಎನ್ನುವ ವಿಷಯ ತಿಳಿದಿದೆ. ನಾವು ಈಗಾಗಲೇ ಅದರ ಬಗ್ಗೆ ವರ್ತಮಾನವನ್ನು ತರಿಸಿಕೊಂಡಿದ್ದೇವೆ. ನಿಮ್ಮ ನಾಯಕರಾದ ಯಡಿಯೂರಪ್ಪನವರೇ, ನೀವು ತುಂಬಾ ಅನುಕೂಲವಾಗಿದ್ದೀರಿ ಎಂದು ಹೇಳಿದ್ದಾರೆ.

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್:- ಅಧ್ಯಕ್ಷರೇ, ಹಿಂದೆ ಪ್ರಧಾನಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರನ್ನು ಬಂಗಾರದಲ್ಲೇ ತೂಗಿದ್ದೇವೆ. ಆದರೆ ದುರ್ದೈವ ಇವ್ಹೊತ್ತಿನ ದಿವಸಗಳಲ್ಲಿ ನಾವೇ ಬಡತನದಲ್ಲಿ ಜೀವನ ಸಾಗಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು ಈಗ ಏನು ನಗರಸಭೆಯವರು ಹಣವನ್ನು ಕೊಡುತ್ತಾರೆ ಎಂದು ಹೇಳಿದ್ದಾರೆ, ಸರ್ಕಾರವೇ ಆರ್ಥಿಕವಾಗಿ ಸಾಲವನ್ನು ಕೊಡುವುದರ ಮುಖಾಂತರ, ಈ ಯೋಜನೆ ಪೂರ್ತಿಗೊಳ್ಳುವುದಕ್ಕೆ ಬೇಕಾದ ಎರಡು ಕೋಟಿ ರೂ.ಗಳನ್ನು ಸರ್ಕಾರದವರು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ತಮ್ಮ ಕಾಲದಲ್ಲಿಯಾದರೂ ಇದು ಪೂರ್ಣವಾಗಬೇಕು ಎಂಬುವುದೇ ನಮ್ಮ ಆಸೆಯಾಗಿದೆ. ಅನೇಕ ಬಾರಿ ನಾನು ವಿಜಾಪುರಕ್ಕೆ ಹೋಗಿ ಬರುತ್ತಿದ್ದೇನೆ, ಇಂದು ಹೊಸ ಯುವಕ ಒಬ್ಬರು ಶಾಸಕರಾಗಿದ್ದಾರೆ, ಅಲ್ಲಿಯ ಜನರ ಮನಸ್ಸಿನಲ್ಲಿ ಏನು ಭಾವನೆ ಇದೆ ಎಂದರೆ, ಈ ಕೆಲಸ ಆಗುತ್ತಿಲ್ಲ, ಶಾಸಕರು ಇದರ ಕಡೆಗೆ ವಿಶೇಷವಾದಂಥ ಗಮನವನ್ನು ಕೊಟ್ಟರೂ ಕೂಡ ಏನೋ ಒಂದು ಕೊರತೆಯಾಗುತ್ತಿದೆ ಎಂದು ತಿಳಿದಿದ್ದಾರೆ. ನಿಮ್ಮ ಕಾಲದಲ್ಲಿ ಈ ಕೆಲಸ ಪೂರ್ಣಗೊಳ್ಳಲು ಏನು ಹಣವನ್ನು ಕೊಡಬಹುದೋ ಅದನ್ನು ಕೊಟ್ಟು ಆದಷ್ಟು ಬೇಗ ಕೆಲಸ ಪೂರ್ಣಗೊಳ್ಳಲು ವಿಶೇಷ ಪ್ರಯತ್ನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಗೆ ಆವರು ಹೇಳಿದ ಹಾಗೆ ಎರಡು ಕೋಟಿ ಹದಿನೇಳು ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಆವರ ಪಾಲು ಕೊಡುತ್ತಿರುವುದು 94 ಲಕ್ಷ ರೂಪಾಯಿ. ಆದುದರಿಂದ ಕೊಡುವುದಕ್ಕೆ ಶಕ್ತಿ ಇಲ್ಲ. ಆದರೂ ಕೇಳುತ್ತಿರುತ್ತಾರೆ. ಮತ್ತೇ ಬಿಜಾಪುರ, ಹುಬ್ಬಳ್ಳಿ, ಧಾರವಾಡ, ಮೈಸೂರು ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ 30 ಕೋಟಿ ರೂಪಾಯಿಯನ್ನು ವಂತಿಗೆಯಾಗಿ ತುಂಬಬೇಕು, ಬಹಳ ಕಡಿಮೆ ಕೊಟ್ಟಿದ್ದಾರೆ. ಬಹಳ ಬಾಕಿ ಉಳಿಸಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮಂಡಲಿಗೆ 130 ಕೋಟಿ ರೂಪಾಯಿ ಬರಬೇಕು. ನಾವು ಕೆ.ಇ.ಬಿ. ಗೆ 80 ಕೋಟಿ ರೂಪಾಯಿಯ ಬಿಲ್ ಕಟ್ಟಿಲ್ಲ, ಬಾಕಿ ಉಳಿಸಿ-

ಕೊಂಡಿದ್ದೇವೆ. ಒಟ್ಟಾರೆ ನಾವು ಇದುವರೆಗೆ 360 ಕೋಟಿ ರೂಪಾಯಿ ಕರ್ನಾಟಕ ನೀರು ಸರಬರಾಜು ಯೋಜನೆ ಮಂಡಳಿಯಿಂದ ಖರ್ಚು ಮಾಡಿದ್ದೇವೆ. ಇದು ನಮ್ಮ ಆರ್ಥಿಕ ಪರಿಸ್ಥಿತಿ. ಆದುದರಿಂದ ಎಂಟು ಕೋಟಿ ರೂಪಾಯಿಗಳನ್ನು ಹುಡ್ಕೋ ಮತ್ತು ಬೇರೆ ಬೇರೆ ಕಡೆಯಿಂದ ಸಾಲ ತೆಗೆದು ಇದರಲ್ಲಿ ತೊಡಗಿಸಿದ್ದೇವೆ. ಶಕ್ತಿ ಇಲ್ಲ ಎಂದರೆ, ಸರ್ಕಾರದಿಂದ ಹೆಚ್ಚು ಹಣ ಕೊಟ್ಟು ಅದನ್ನು ಮುಗಿಸುವುದಕ್ಕೆ ಪ್ರಯತ್ನ ಪಡುತ್ತೇವೆ.

ವಿಷಯ:- ಲ್ಯಾಮ್ಸ್ ಡೌನ್ ಕಟ್ಟಡದ ದುರಸ್ತಿ ಕಾಮಗಾರಿ ಕುರಿತು.

349 (1153) **ಶ್ರೀ ಎ. ರಾಮದಾಸ್ (ಕೃಷ್ಣರಾಜ):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಪಾಲಿಕೆ ಆಸ್ತಿಯಾಗಿರುವ ಲ್ಯಾಮ್ಸ್ ಡೌನ್ ಕಟ್ಟಡ ಒಂದು ಪುರಾತನ ಸುಂದರ ಕಟ್ಟಡವಾಗಿದ್ದು, ಇಂದು ದುರಸ್ತಿ ಆಗಬೇಕಾದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ಪುರಾತನ ಕಟ್ಟಡಗಳ ರಕ್ಷಣೆಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಹೌದು

ಆ) ತಜ್ಞರ ಅಭಿಪ್ರಾಯ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು:- ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ನನಗೆ ಪತ್ರ ಬರೆದು ಏನೋ ತೊಂದರೆ ಇದೆ ಎಂದು ಹೇಳಿದ್ದಾರೆ. ಅವರ ಪರವಾಗಿ ಯಾರಾದರೂ ಉತ್ತರ ಕೊಡುತ್ತೀರೋ? ನಿನ್ನೆನೇ ನನಗೆ ಬರೆದು ಕಳುಹಿಸಿದ್ದಾರೆ. He has expressed his difficulty to be present in the House. ಹೇಗೆ ಮಾಡುತ್ತೀರಾ? ಅಕ್ಸೆಪ್ಟ್ ಮಾಡುತ್ತೀರಾ? ಯಾರಾದರೂ ಉತ್ತರ ಹೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಮಂತ್ರಿಗಳದು ರಿಪ್ಲೈ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಅದರ ತಯಾರಿ ನಡೆಸಿರಬೇಕು.

ಅಧ್ಯಕ್ಷರು:- ಇಲ್ಲ, I will take it up again. ಈಗ ಒಂದು ಕೆಲಸ ಮಾಡೋಣ. ಆಮೇಲೆ ನಿಮಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ. ಮಂತ್ರಿಯವರು ಮೊದಲೇ ಬರೆದು ತಿಳಿಸಿದ್ದಾರೆ. ಇವರು ವ್ಯವಸ್ಥೆ ಮಾಡಿಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೊನೆಗೆ ಯಾರಿಗೆ ಇಲ್ಲ ಎಂದರೂ ಪವರ್ ಆಫ್ ಅಥಾರಿಟಿಯನ್ನು ನಾಣಯ್ಯನವರಿಗಾದರೂ ಅವರು ಕೊಡಬೇಕಾಗಿತ್ತು.